ಗಂಟೆ ಸಂಜೆ ಆರೂವರೆಯಾಗಿತ್ತು. ‘ಸವ್ಯಸಾಚಿ’ ಪತ್ರಿಕಾ ಕಚೇರಿಯಲ್ಲಿ ಮರುದಿನ ಅಚ್ಚಾಗಬೇಕಿದ್ದ ಪತ್ರಿಕೆಯ ಪುಟಗಳು ಸಿದ್ಧಗೊಳ್ಳುತ್ತಿದ್ದವು. ಸಂಪಾದಕರು ತಮ್ಮ ಕಂಪ್ಯೂಟರ್ ಸ್ಕ್ರೀನಿನಲ್ಲಿ ಬರುತ್ತಿದ್ದ, ಅಂದು ಪುಟಕ್ಕೆ ಹೋಗಬೇಕಿದ್ದ ಒಂದೊಂದೇ ಸುದ್ದಿಯನ್ನು ಗಮನವಿಟ್ಟು ಓದುತ್ತಾ ಕುಳಿತಿದ್ದರು. ಅಷ್ಟು ಹೊತ್ತಿಗೆ ಕಂಬ ಒಡೆದು ಹೊರಗೆ ಬಂದ ನರಹರಿಯಂತೆ ವರದಿಗಾರ ಶ್ರೀನಿವಾಸ “ಮೇ ಐ ಕಮಿನ್ ಸರ್?” ಎನ್ನುತ್ತಲೇ ಅಪ್ಪಣೆಗೂ ಕಾಯದೆ ಬಾಗಿಲು ದೂಡಿ ಒಳಗೆ ಬಂದ. ಕೈಯಲ್ಲಿ ಮೂರ್ನಾಲ್ಕು ಕಾಗದದ ಹಾಳೆಗಳು. “ಸೆನ್ಸೇಶನಲ್ ನ್ಯೂಸ್ ಸಾರ್... ನನ್ನನ್ನು ಕಾಂಟಾಕ್ಟ್ ಬಿಲ್ಡಪ್ ಮಾಡಲು ಗೊತ್ತಿಲ್ಲದ ಅಯೋಗ್ಯ ಅನ್ನುತ್ತಿದ್ದೀರಲ್ಲ... ಸ್ವೀಟ್‌ಹೋಮ್ ಫೈವ್ ಸ್ಟಾರ್ ಹೋಟೆಲಿನ ನನ್ನ ಕಾಂಟಾಕ್ಟಿನಿಂದ ದೊರೆತ ನ್ಯೂಸ್. ಬೇರೆ ಯಾವ ಪತ್ರಿಕೆಗೂ ಕೊಟ್ಟಿಲ್ಲ. ಎಮ್ಮೆಲ್ಲೆ ಶಿವಣ್ಣನ ಸೀಕ್ರೆಟ್ ಹೆಂಡತಿಯ ವಿಷಯ. ಪತ್ರಿಕೆಗೂ ನಮಗೂ ಹೆಸರು ಬರೋದು ಖಂಡಿತ. ಶಿವಣ್ಣನವರನ್ನು ಎದುರು ಹಾಕಿಕೊಳ್ಳೋ ಗಟ್ಸ್ ಇದ್ರೆ ಮುಖಪುಟದಲ್ಲಿ ಹಾಕಿಸಿ” ಒಂದೇ ಉಸಿರಿನಲ್ಲಿ ಹೇಳಿ ಬೀಗುತ್ತ ನಿಂತುಕೊಂಡ.

ಸಂಪಾದಕರು ಆತ ಕೊಟ್ಟ ಹಾಳೆಗಳನ್ನು ಎತ್ತಿಕೊಂಡರು. ‘ಬರ್ತ್‌ಡೇ ಚಟ್ನಿ: ಗೌರೀಪುರ ಶಾಸಕರ ಜನ್ಮದಿನಾಚರಣೆಯ ವೇಳೆ ಅವರ ಮೊದಲನೇ ಹೆಂಡತಿ ಮತ್ತು ಎರಡನೇ ಹೆಂಡತಿ ಎನ್ನಲಾದ ಇಬ್ಬರ ನಡುವೆ ಹೋಟೆಲ್ ಲಾಂಜ್‌ನಲ್ಲಿ ಕಿತ್ತಾಟ’ ವರದಿಯನ್ನು ಸೊಗಸಾಗಿ ಜನರಿಗೆ ಓದಲು ಇಷ್ಟವಾಗುವ ಮಸಾಲೆ ಭಾಷೆಯಲ್ಲಿ ಸಿದ್ಧಪಡಿಸಿದ್ದ. ನಾಳೆಯ ದಿನ ‘ಸವ್ಯಸಾಚಿ’ ಪತ್ರಿಕೆಯ ಈ ವಾರ್ತೆ ಸಾರ್ವಜನಿಕವಾಗಿ ಗುಲ್ಲೆಬ್ಬಿಸುವುದು ನಿಶ್ಚಯ. ಅದರೊಂದಿಗೆ ಸಂಪಾದಕರ ಧೈರ್ಯ ಮೆಚ್ಚಬೇಕು ಅನ್ನುವ ಕಾಂಪ್ಲಿಮೆಂಟೂ ಬರುತ್ತದೆ. ಹೇಗೂ ಶಾಸಕ ಶಿವಣ್ಣ ಮುಖ್ಯಮಂತ್ರಿಯವರ ವಿರೋಧಿಗಳ ಗುಂಪಿನಲ್ಲಿ ಗುರ್ತಿಸಿಕೊಂಡವರು. ವಾರ್ತೆ ಸುಳ್ಳಲ್ಲದಿದ್ದರೆ ದೊಡ್ಡ ರಿಸ್ಕ್ ಏನೂ ಇಲ್ಲ. ಶಿವಣ್ಣ ರೇಗಿ ಫೋನ್ ಮಾಡಿ ಕೂಗಾಡಬಹುದು. ಹೆಚ್ಚೆಂದರೆ ಆತನ ಚೇಲಾಗಳಿಂದ ಆಫೀಸಿಗೆ ಕಲ್ಲು ಹೊಡೆಸಬಹುದು. ಪರವಾಗಿಲ್ಲ, ಇನ್ಸೂರೆನ್ಸ್ ಇದೆ. ಶಿವಣ್ಣನವರ ವಿರೋಧಿಗಳು ಮೆಚ್ಚಿಕೊಳ್ಳುತ್ತಾರೆ. ಸಂಪಾದಕನಾಗಿ ತನಗೂ ಅಲ್ಪಸ್ವಲ್ಪ ಬಿಲ್ಡಪ್ ಸಿಗುತ್ತದೆ. ಮುಖ್ಯಮಂತ್ರಿಗಳಿಗೂ ಒಳಗೊಳಗೇ ಖುಷಿಯಾಗಬಹುದು. ಮತ್ತೆ ಎರಡು ಮೂರುದಿನಗಳಲ್ಲಿ ವಿಷಯ ತಣ್ಣಗಾಗುತ್ತೆ. ಯೋಚನಾಲಹರಿಯನ್ನು ಅರ್ಧಕ್ಕೆ ನಿಲ್ಲಿಸಿ ಸಂಪಾದಕರು ಸಂಪೂರ್ಣ ವರದಿಯನ್ನು ಇನ್ನೊಮ್ಮೆ ಓದಿದರು. “ವರದಿ ಸತ್ಯ ತಾನೇ...” ಶ್ರೀನಿವಾಸನನ್ನು ದಿಟ್ಟಿಸಿ ನೋಡಿ ಕೇಳಿದರು. “ಸಾರ್, ಫೋಟೊ ಕೂಡ ಇದೆ. ನಂದಿಗೆ ಕೊಟ್ಟು ಚೆಕ್ ಮಾಡಿಸಿದೆ. ಫೋಟೊಶಾಪ್ ಅಲ್ಲ ಅಂತ





ಚಿತ್ರಗಳು: ವೆಂಕಟ್ರಮಣ ಭಟ್